**ದಿನಾಂಕ – 07-07-2023 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರತಿಜ್ಞಾವಿಧಿ ಬೋಧಿಸಲಾಯಿತು. ಮುಂದುವರೆದ ಮುಖ್ಯ ವಿಚಾರಣೆ - ಹಿರಿಯ ಸಸಅ ರವರಿಂದ**

ನನ್ನ ಗಂಡ ಮತ್ತು ಮಗನ ಹೆಸರಿನಲ್ಲಿ ಹಣ ಹಾಕಿದ ಬಗ್ಗೆ ಆರೋಪಿತರ ಕಡೆಗೆ ಕೊಟ್ಟ ಬಗ್ಗೆ ಶ್ರೀ ಗಂಗಾಧರ ಸ್ವಾಮಿ ಲಕ್ಕಿ ಫ್ಯಾಮೀಲಿ ಹೋಮ್ ಹೆಸರಿನ 2 ಚೀಟಿಗಳ ಹಣ ಸ್ವಿಕೃತಿ ಬಗ್ಗೆ ರಸೀದಿಗಳನ್ನು ಕೊಟ್ಟಿದ್ದು ಸದರಿ ರಸೀದಿಗಳನ್ನು ನಾನು ಪೋಲಿಸರಿಗೆ ನೀಡಿದ್ದು ಸಾಕ್ಷಿ ಸದರಿ ರಸೀದಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ-64 ಮತ್ತು 65 ಎಂದು ಗುರುತಿಸಲಾಗಿದೆ. ನಿಪಿ-64 ನನ್ನ ಗಂಡನ ಹೆಸರಿಗೆ ನಿಪಿ-65 ನನ್ನ ಮಗನ ಹೆಸರಿಗೆ ಇರುತ್ತದೆ. ನಿಪಿ-64 ಮತ್ತು 65 ಕ್ಕೆ ಬಸ್ಸಮ್ಮ ಸಹಿ ಮಾಡಿರುತ್ತಾರೆ. ಸಾಕ್ಷಿ ಸದರಿ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಶ್ರೀ ಗಂಗಾಧರ ಸ್ವಾಮಿ ಲಕ್ಕಿ ಫ್ಯಾಮೀಲಿ ಹೋಮ್ ಸ್ಕೀಮ್ ಅನ್ನು ಆರೋಪಿ 1 ರಿಂದ 4 ರವರು ನಡೆಸುತ್ತಿದ್ದು ಅವರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರು ನ್ಯಾಯಾಲಯದ ಮುಂದೆ ಇರುವ 2 ಮತ್ತು 3 ನೇ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. 4 ನೇ ಆರೋಪಿ ಗೈರು ಹಾಜರು ಇದ್ದು ಅವರ ಗುರುತಿನ ಬಗ್ಗೆ ಆರೋಪಿ ಪರ ವಕೀಲರ ತಕರಾರು ಇರುವುದಿಲ್ಲ. ಈ ಬಗ್ಗೆ ನನ್ನ ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲುಃ 2, 3 ನೇ ಆರೋಪಿತರ ಪರ ಹೆಚ್.ಆರ್ ವಕೀಲರಿಂದ**

ಯಾವ ಯಾವ ದಿನಾಂಕ ಹಣ ಕಟ್ಟಿರುತ್ತೀರಾ ಎಂದರೆ ಸಾಕ್ಷಿಯು ಪ್ರತಿ ತಿಂಗಳು 13 ರೊಳಗೆ ಹಣ ಕಟ್ಟುತ್ತಿದ್ದೇವು ಎಂದು ಹೇಳುತ್ತಾರೆ. ನನಗೆ ನಿಖರವಾಗಿ ದಿನಾಂಕ ಹೇಳಲು ಆಗುವುದಿಲ್ಲ. ಶ್ರೀ ಗಂಗಾಧರ ಸ್ವಾಮಿ ಲಕ್ಕಿ ಫ್ಯಾಮೀಲಿ ಹೋಮ್ ನೊಂದಣಿ ಆಗಿಲ್ಲ ಎಂದರೆ ಸರಿ. ಅದನ್ನು ನಡೆಸಲು ಸರಕಾರದಿಂದ ಯಾವುದೇ ಪರವಾನಿಗೆ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಪಿ-64 ಕಾಗದಗಳು ಎಲ್ಲ ಕಡೆ ಸಿಗುತ್ತವೆ ಎಂದರೆ ಸರಿ. ನಾನು ಯಾವುದೇ ಸ್ಕಿಮ್ ಗೆ ಹಣವನ್ನು ಕಟ್ಟಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿ ಬಸ್ಸಮ್ಮ ಅಂಗನವಾಡಿ ಶಿಕ್ಷಕರು ಎಂದರೆ ಸರಿ. 1 ನೇ ಆರೋಪಿಗೆ ಮತ್ತು ಮತ್ತೊಬ್ಬ ಅಂಗನವಾಡಿ ಶಿಕ್ಷಕಿ ನಡುವೆ ಜಗಳ ಇತ್ತು ಎಂದರೆ ಸರಿಯಲ್ಲ. ನಾನು ಅವರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 3 ನೇ ಆರೋಪಿ

ಹುಬ್ಬಳ್ಳಿಯಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. 2 ನೇ ಆರೋಪಿ ಬೆಂಗಳೂರಿನಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ವ್ಯವಹಾರಕ್ಕೆ ಮತ್ತು 2 ಮತ್ತು 3 ನೇ ಆರೋಪಿಗಳಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಶ್ರೀ ಗಂಗಾಧರ ಸ್ವಾಮಿ ಲಕ್ಕಿ ಫ್ಯಾಮೀಲಿ ಹೋಮ್ ಯಾವುದೇ ಸ್ಕಿಮ್ ಮಾಡಿಲ್ಲ ಮತ್ತು ಹಣ ಕಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಪೋಲಿಸರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 4 ನೇ ಆರೋಪಿ ಪರ ಎನ್.ಬಿ.ಆರ್ ವಕೀಲರಿಂದ**

ನಮಗೆ ಆರೋಪಿತರು ಹಣ ಮೋಸ ಮಾಡಿ ಓಡಿ ಹೋಗಿದ್ದಾರೆ ಎಂದು ಎಲ್.ಬಿ.ಎಸ್ ನಗರದಲ್ಲಿ ಇರುವ ಜನರಿಗೆ ಗೊತ್ತಾಗಿದ್ದು ನಾವು 7-8 ಜನರು ಕೂಡಿ ಪೋಲಿಸರಿಗೆ ದೂರು ಕೊಟ್ಟಿರುತ್ತೇವೆ. ಅದು ಆದ ನಂತರ ನಾನು ಪುನಃ ಠಾಣೆಗೆ ಹೋಗಿಲ್ಲ ಎಂದರೆ ಸರಿ. 4 ನೇ ಆರೋಪಿ ನಮ್ಮ ಜೊತೆ ಠಾಣೆಗೆ ದೂರು ಕೊಡಲು ಹೋದಾಗ ಬಂದಿದ್ದಳು ಎಂದು ಪತ್ರಿಕೆಯಲ್ಲಿ ಬಂದಿದೆ ಎಂದರೆ ಸರಿ. ನನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ ಪೋಲಿಸರು ಹೇಳಿದ ಮೇರೆಗೆ ಸಾಕ್ಷಿ ಹೇಳಲು ಬಂದಿದ್ದೇನೆ ಎಂದರೆ ಸರಿಯಲ್ಲ.

## ಮರು ವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನೇಯ ಮೇರೆಗೆ ಬೆರಳಚ್ಚುಗಾರರು ಬೆರಳಚ್ಚು ಮಾಡಿರುತ್ತಾರೆ ಮತ್ತು ಅದನ್ನು ಸಾಕ್ಷಿಗೆ ಓದಿ ತಿಳಿಸಿ ಹೇಳಿದಾಗ ಸಾಕ್ಷಿ ಸರಿ ಅಂತ ಒಪ್ಪಿಕೊಂಡಿರುತ್ತಾರೆ)**

**ಪ್ರಧಾನ ಹಿರಿಯ ಸಿವಿಲ್ ಮತ್ತು ಸಿಜೆಎಂ**
**ನ್ಯಾಯಾಧೀಶರು, ರಾಯಚೂರು**

ಸಿಸಿ-380/2010 ಪಿಡಬ್ಲೂ-11

ಪಿಡಬ್ಲೂ-11

ದಾವೆ-23/2022 ಪಿಡಬ್ಲೂ-1

**<u>ದಿನಾಂಕ – 30-06-2023 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರತಿಜ್ಞಾವಿಧಿ ಬೋಧಿಸಲಾಯಿತು. ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆ - ವಾದಿ ಪರ ಶ್ರೀ ಎಂ.ಪಿ ವಕೀಲರಿಂದ</u>**

1. ರಿಜಿನಲ್ ಮ್ಯಾನೇಜರ್ ಇವರು ನನಗೆ ನೀಡಿದ ಆಥರೈಜೇಶನ್ ಅನ್ನು ನಿಪಿ-11 ಎಂದು ಗುರುತಿಸಲಾಯಿತು.

**ಪ್ರತಿವಾದಿಗಳು ಏಕಪಕ್ಷಿಯವಾಗಿದ್ದರಿಂದ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು**.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನೇಯ ಮೇರೆಗೆ ಬೆರಳಚ್ಚುಗಾರರು ಬೆರಳಚ್ಚು ಮಾಡಿರುತ್ತಾರೆ ಮತ್ತು ಅದನ್ನು ಸಾಕ್ಷಿಗೆ ಓದಿ ತಿಳಿಸಿ ಹೇಳಿದಾಗ ಸಾಕ್ಷಿ ಸರಿ ಅಂತ ಒಪ್ಪಿಕೊಂಡಿರುತ್ತಾರೆ)**

**ಪ್ರಧಾನ ಹಿರಿಯ ಸಿವಿಲ್ ಮತ್ತು ಸಿಜೆಎಂ**
**ನ್ಯಾಯಾಧೀಶರು, ರಾಯಚೂರು**